# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1258(1233) |
| ಸದಸ್ಯರ ಹೆಸರು | ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 17.03.2021 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹೋಬಳಿ ಮಟ್ಟದಲ್ಲಿರುವ ಅಟಲ್‌ಜೀ ಜನಸ್ನೇಹಿ ಕೇಂದ್ರಗಳೆಷ್ಟು ; | ರಾಜ್ಯದಲ್ಲಿ ಹೋಬಳಿ ಮಟ್ಟದಲ್ಲಿ ಒಟ್ಟು 769 ನಾಡ ಕಛೇರಿಗಳು, 122 ಫ್ರಂಟ್ ಆಫೀಸ್ ಗಳು ಮತ್ತು 30 ಸ್ಪಂದನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. |
| ಆ) | ಇಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಡಾಟಾ ಎಂಟ್ರಿ ಆಪರೇಟರ್ ಗಳ ಸಂಖ್ಯೆ ಎಷ್ಟು; | ಸದರಿ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಡಾಟಾ ಎಂಟ್ರಿ ಆಪರೇಟರ್ ಗಳ ವಿವರ ಈ ಕೆಳಗಿನಂತಿದೆ.<br><br>**ರೆಗ್ಯುಲರ್ ಡಾಟಾ ಎಂಟ್ರಿ ಆಪರೇಟರ್ ಗಳ ಸಂಖ್ಯೆ**: 769<br>**ಫ್ರಂಟ್ ಆಫೀಸ್ ಡಾಟಾ ಎಂಟ್ರಿ ಆಪರೇಟರ್ ಗಳ ಸಂಖ್ಯೆ**: 98<br>**ಕಸಬಾ ನಾಡಕಛೇರಿಗಳಲ್ಲಿ ಪಹಣಿ ವಿತರಣೆಯ ಡಾಟಾ ಎಂಟ್ರಿ ಆಪರೇಟರ್ ಗಳ ಸಂಖ್ಯೆ**: 224<br>**ಸ್ಪಂದನ ಡಾಟಾ ಎಂಟ್ರಿ ಆಪರೇಟರ್ ಗಳ ಸಂಖ್ಯೆ**: 30<br>**ಒಟ್ಟು ಡಾಟಾ ಎಂಟ್ರಿ ಆಪರೇಟರ್ ಗಳ ಸಂಖ್ಯೆ**: 1121 |
| ಇ) | ಇವರಿಗೆ ಕಳೆದ 8-10 ತಿಂಗಳಿಂದ ಸಂಬಳ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಪರೇಟರ್ ಗಳಿಗೆ ಹಲವಾರು ತಿಂಗಳುಗಳ ಸಂಭಾವನೆ ಪಾವತಿಯಾಗದೇ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅದರಂತೆ, ಜಿಲ್ಲೆಗಳ ಕೇಂದ್ರಗಳಲ್ಲಿ ಸ್ವೀಕೃತಿಯಾದ ಮೊತ್ತವನ್ನು ಜಿಲ್ಲಾಧಿಕಾರಿಗಳ ಅಟಲ್ ಜೀ ಜನಸ್ನೇಹಿ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತಿದ್ದು ಸದರಿ ಮೊತ್ತದಿಂದ ಡಾಟಾ ಎಂಟ್ರಿ ಆಪರೇಟರ್ ಗಳ ಸಂಭಾವನೆಯನ್ನು ಮೊದಲನೆ ಆಧ್ಯತೆ ಮೇಲೆ ಪಾವತಿಸಲು ಪತ್ರ ಮುಖೇನ ಹಾಗೂ ವಿಡಿಯೋ ಕಾನ್ಫರೆನ್ಸ್ ನಲ್ಲಿ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ. ಒಂದು ವೇಳೆ ಜಿಲ್ಲಾಧಿಕಾರಿಗಳ ಬ್ಯಾಂಕ್ ಖಾತೆಯಲ್ಲಿ ಅನುದಾನ ಲಭ್ಯವಿಲ್ಲದೇ ಇದ್ದಲ್ಲಿ ನಿರ್ದೇಶನಾಲಯಕ್ಕೆ ನಿಗದಿತ ಮಾಹಿತಿಯೊಂದಿಗೆ ಪ್ರಸ್ತಾವನೆ ಸಲ್ಲಿಸಲು ಹಾಗೂ ನಿರ್ದೇಶನಾಲಯದಿಂದ ಮತ್ತು ಜಿಲ್ಲಾಧಿಕಾರಿಯವರ ಬ್ಯಾಂಕ್ ಖಾತೆಯಿಂದ ಬಿಡುಗಡೆಯಾದ ಮೊತ್ತದಿಂದ ಆಪರೇಟರ್‌ಗಳಿಗೆ ಏಜೆನ್ಸಿಯವರಿಂದ ವೇತನ ಪಾವತಿಯಾಗಿರುವ ಬಗ್ಗೆ ಮಾಹಿತಿಯನ್ನು Google Spread Sheet ನಲ್ಲಿ ಸಲ್ಲಿಸಲು ಸಹ ನಿರ್ದೇಶಿಸಲಾಗಿದೆ. |
| ಈ) | ಇವರಿಗೆ ಒಂದೊಂದು ಜಿಲ್ಲೆಗಳಲ್ಲಿ ಒಂದೊಂದು ರೀತಿ ವೇತನ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಉ) | ಒಂದೇ ರೀತಿ ವೇತನವನ್ನು ಪಾವತಿಸಲು ಹಾಗೂ ಇವರುಗಳಿಗೆ ಸೇವಾ ಭದ್ರತೆ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ತಿಳಿಸುವುದು) | ಅಟಲ್ ಜೀ ಜನಸ್ನೇಹಿ ನಿರ್ದೇಶನಾಲಯದಿಂದ ಒಂದೇ ಮಾದರಿಯ ಟೆಂಡರ್ ದಾಖಲೆಗಳನ್ನು ತಯಾರಿಸಿ, ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯಿಂದ ಹೊರಡಿಸಲಾದ ವಲಯವಾರು ಆದೇಶದ ಅನ್ವಯ, ಪ್ರತಿ ಆಪರೇಟರ್ ಗಳ ಸಂಭಾವನೆ ಗುರುತಿಸಿ, ಸದರಿ ಮೊತ್ತದ ಮೇಲೆ ಶೇ.10% ಕ್ಕಿಂತ ಹೆಚ್ಚುವರಿಯಾಗದೇ, ಸೇವಾ ಶುಲ್ಕವನ್ನು ನೀಡಿ ಟೆಂಡರ್ ಕರೆಯಲು ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ.<br>ಈ ನೌಕರರು ಹೊರಗುತ್ತಿಗೆ ಆಧಾರದಲ್ಲಿ ನೇಮಕಗೊಂಡಿದ್ದು, ಸೇವಾ ಭದ್ರತೆ ನೀಡಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ. |

**ಸಂಖ್ಯೆ: ಕಂಇ 20 ಎಲ್‌ಆರ್‌ಡಿ 2021**

**(ಆರ್. ಅಶೋಕ)**
ಕಂದಾಯ ಸಚಿವರು

Radhika/ All La-Lc Question 2244